**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**
**ಫೌಜುದಾರಿ ಪ್ರಕರಣ ಸಂಖ್ಯೆ 35/2018**

ಫಿರ್ಯಾದಿಃ ಸರಕಾರದ ಪರವಾಗಿ
ಪೋಲಿಸ್ ಉಪ-ನಿರೀಕ್ಷಕರು,
ಹೊನ್ನಾವರ ಪೋಲಿಸ್ ಠಾಣೆ, ಹೊನ್ನಾವರ.

**-ವಿರುದ್ಧ-**

ಆರೋಪಿಃ 1) ಶಂಕರ ತಂದೆ ಕೃಷ್ಣ ಭಟ್ಟ,
ವಯಸ್ಸುಃ 48 ವರ್ಷಗಳು,
ಉದ್ಯೋಗಃ ರೈತಾಬಿ ಕೆಲಸ,
ಸಾಕೀನಃ ಹೆಗ್ಗಾರಮಕ್ಕಿ, ಸಾಲಕೋಡ,
ತಾಲೂಕುಃ ಹೊನ್ನಾವರ.

2) ಶ್ರೀಧರ ತಂದೆ ವಾಸುದೇವ ಹೆಗಡೆ,
ವಯಸ್ಸುಃ 34 ವರ್ಷಗಳು,
ಉದ್ಯೋಗಃ ಶ್ರೀ ಕರಿಕಾನ ಪರಮೇಶ್ವರಿ ವ್ಯವಸಾಯ ಸೇವಾ
ಸಹಕಾರಿ ಸಂಘ ನಿಯಮಿತದಲ್ಲಿ ಮಾಜಿ ಗುಮಾಸ್ತ,
ಸಾಕೀನಃ ಹೆಗ್ಗಾರಮಕ್ಕಿ, ಸಾಲಕೋಡ,
ತಾಲೂಕುಃ ಹೊನ್ನಾವರ.

**ದೋಷಾರೋಪಣೆ**

ಶ್ರೀ ಬಿ.ಸಿ. ಚಂದ್ರಶೇಖರ್, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಗಳಾದ ನೀವು ಮೇಲೆ ಈ ಕೆಳಕಂಡ ದೋಷಾರೋಪಣೆಗಳನ್ನ ಹೊರೆಸುತ್ತಿದ್ದೇನೆ.

1.ಮೊದಲನೇಯದಾಗಿ, 1 ನೇ ಆರೋಪಿಯು ಹೊನ್ನಾವರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಶ್ರೀ ಕರಿಕಾನ ಪರಮೇಶ್ವರಿ ವ್ಯವಸಾಯ ಸೇವಾ ಸಂಘ ನಿಯಮಿತ, ಸಾಲ್ಕೋಡದಲ್ಲಿ ಆಡಳಿತ ಮಂಡಳಿ ನಿರ್ದೇಶಕರಾಗಿದ್ದು, 2 ನೇ ಆರೋಪಿಯು ಕಳೆದ 4 ವರ್ಷಗಳಿಂದ ಸಂಬಳ ಪಡೆಯುತ್ತಿರುವ ಗುಮಾಸ್ತರಾಗಿದ್ದು, ದಿಃ 29-09-2016 ರಂದು ಸಂಘದ ಹಣವನ್ನು ದುರುಪಯೋಗಪಡಿಸಿಕೊಳ್ಳುವ ಉದ್ದೇಶದಿಂದ ಕಾರ್ಯಾಲಯದಲ್ಲಿ ಯಾರು ಇಲ್ಲದ ಸಮಯದಲ್ಲಿ ಸಂಘದ ಅಧ್ಯಕ್ಷರಾದ ಚಾಸಾ-1 ಗಣಪತಿ ದತ್ತಾ ತಂದೆ ವಿನಾಯಕ ಭಟ್ಟ ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾದ ಚಾಸಾ-6 ನಾರಾಯಣ ಶಂಭು ಹೆಗಡೆಯವರ ಸಂಘದ ತುರ್ತು ವ್ಯವಹಾರಕ್ಕಾಗಿ ಉಪಯೋಗಿಸಿಕೊಳ್ಳಲು ಸಂಘದ ಕಾರ್ಯಾಲಯದಲ್ಲಿ ಸಹಿ ಮಾಡಿ ಇಟ್ಟಿದ್ದ ಖಾಲಿ ಚೆಕ್‌ನ್ನು 2 ನೇ ಆರೋಪಿಯು 1 ನೇ ಆರೋಪಿಗೆ ಕಳ್ಳತನ ಮಾಡಿ ಕೊಟ್ಟಿದ್ದು, ಈ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 379 ಮತ್ತು 381 ಸಹವಾಚಿತ ಕಲಂ 34 ರಡಿಯಲ್ಲಿ ಅಪರಾಧ ಎಸಗಿರುತ್ತಿರಿ ಎನ್ನುವ ದೋಷಾರೋಪಣೆಗಳನ್ನ ಹೊರಿಸುತ್ತಿದ್ದೇನೆ.

2.ಎರಡನೇಯದಾಗಿ, ಮೇಲೆ ಹೇಳಿದ ರೀತಿಯಲ್ಲಿ, 1 ನೇ ಆರೋಪಿಯು ಸಂಘದ ಆಡಳಿತ ಮಂಡಳಿ ನಿರ್ದೇಶಕರಾಗಿದ್ದು ಮತ್ತು 2 ನೇ ಆರೋಪಿಯು ಸಂಘದ ಗುಮಾಸ್ತರಾಗಿದ್ದು, ಸಂಘದ ಹಣವನ್ನು ದುರುಪಯೋಗಪಡಿಸಿಕೊಳ್ಳುವ ಉದ್ದೇಶದಿಂದ ದಿನಾಂಕಃ 01-10-2018 ರಂದು 1 ನೇ ಆರೋಪಿಯು ಚೆಕ್‌ನ್ನು ಅರೆಅಂಗಡಿಯಲ್ಲಿರುವ ನಿಮ್ಮ ಕರ್ನಾಟಕ ಬ್ಯಾಂಕ್ ಖಾತೆಗೆ ನಗದಿಕರಿಸಲು ಹಾಕಿ ನಂತರ ಸಂಘದ ಖಾತೆ ಹೊಂದಿರುವ ಕೆ.ಡಿ.ಸಿ.ಸಿ ಬ್ಯಾಂಕಿನ ಮೂಲಕ ಕರ್ನಾಟಕ ಬ್ಯಾಂಕಿನಲ್ಲಿ ನಗದಿಕರಿಸಿಕೊಂಡು ಚೆಕ್‌ನ್ನು ಅಪ್ರಾಮಾಣಿಕವಾಗಿ ದುರ್ವಿನಿಯೋಗ ಮಾಡಿ ಈ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 403 ಸಹವಾಚಿತ ಕಲಂ 34 ರಡಿ ಅಪರಾಧ ಎಸಗಿರುತ್ತಿರಿ ಎನ್ನುವ ದೋಷಾರೋಪಣೆಗಳನ್ನ ಹೊರಿಸುತ್ತಿದ್ದೇನೆ.

3.ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯು ಸಂಘದ ಆಡಳಿತ ಮಂಡಳಿ ನಿರ್ದೇಶಕರಾಗಿದ್ದು ಮತ್ತು 2 ನೇ ಆರೋಪಿಯು ಸಂಘದ ಗುಮಾಸ್ತರಾಗಿದ್ದು, 1 ಮತ್ತು 2 ನೇ ಆರೋಪಿತರು ಸಾರ್ವಜನಿಕ ನೌಕರರಾಗಿದ್ದು, ಸಂಘದ ಹಣವನ್ನು ದುರುಪಯೋಗಪಡಿಸಿಕೊಳ್ಳುವ ಉದ್ದೇಶದಿಂದ ಚಾಸಾ-1 ಮತ್ತು 6 ರವರು ವಿಶ್ವಾಸದಲ್ಲಿ ಸಹಿ ಮಾಡಿ ಕೊಟ್ಟಿರುವ ಖಾಲಿ ಚೆಕ್‌ನ್ನು ಕಳ್ಳತನ ಮಾಡಿ ಈ ಮೂಲಕ ಆರೋಪಿತರು ಸಾರ್ವಜನಿಕ ನೌಕರರಾಗಿ ಅಪರಾಧಿಕ ನಂಬಿಕೆ ದ್ರೋಹ ಮಾಡಿದ್ದರಿಂದ ಈ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 406, 408 ಮತ್ತು 409 ಸಹವಾಚಿತ ಕಲಂ 34 ರಡಿಯಲ್ಲಿ ಅಪರಾಧ ಎಸಗಿರುತ್ತಿರಿ ಎನ್ನುವ ದೋಷಾರೋಪಣೆಗಳನ್ನ ಹೊರಿಸುತ್ತಿದ್ದೇನೆ.

4.ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯು ಸಂಘದ ಆಡಳಿತ ಮಂಡಳಿ ನಿರ್ದೇಶಕರಾಗಿದ್ದು ಮತ್ತು 2 ನೇ ಆರೋಪಿಯು ಸಂಘದ ಗುಮಾಸ್ತರಾಗಿದ್ದು, ಸಂಘದ ಹಣವನ್ನು ದುರುಪಯೋಗಪಡಿಸಿಕೊಳ್ಳುವ ಉದ್ದೇಶದಿಂದ ಚಾಸಾ-1 ಮತ್ತು 6 ರವರು ವಿಶ್ವಾಸದಲ್ಲಿ ಸಹಿ ಮಾಡಿ ಕೊಟ್ಟಿರುವ ಖಾಲಿ ಚೆಕ್‌ನ್ನು ಕಳ್ಳತನ ಮಾಡಿ ಸಂಘಕ್ಕೆ ವಂಚಿಸುವ ಉದ್ದೇಶದಿಂದ ಖಾಲಿ ಚೆಕ್‌ನಲ್ಲಿ ಸುಳ್ಳು ಸ್ವಷ್ಠನೆ ಬರೆದು ಸಂಘದ 12 ಲಕ್ಷ ರೂಪಾಯಿಗಳನ್ನು ಚೆಕ್ ಮೂಲಕ ನಗದಿಸಿಕರಿಸಿ ನಿಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡು ಈ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 467 ಮತ್ತು 468 ಸಹವಾಚಿತ ಕಲಂ 34 ರಡಿಯಲ್ಲಿ ಅಪರಾಧ ಎಸಗಿರುತ್ತಿರಿ ಎನ್ನುವ ದೋಷಾರೋಪಣೆಗಳನ್ನ ಹೊರಿಸುತ್ತಿದ್ದೇನೆ.

**ಸಹಿ ಇದೆ.**

ದಿನಾಂಕಃ 31-08-2024

ಸ್ಥಳಃ ಹೊನ್ನಾವರ

**(ಶ್ರೀ ಬಿ.ಸಿ. ಚಂದ್ರಶೇಖರ್)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**

**<u>ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ</u>**
**<u>ಫೌಜುದಾರಿ ಪ್ರಕರಣ ಸಂಖ್ಯೆ: 35/2018</u>**

ಫಿರ್ಯಾದಿಃ ಸರಕಾರದ ಪರವಾಗಿ
ಪೋಲಿಸ್ ಉಪ-ನಿರೀಕ್ಷಕರು,
ಹೊನ್ನಾವರ ಪೋಲಿಸ್ ಠಾಣೆ, ಹೊನ್ನಾವರ.

**-ವಿರುದ್ಧ-**

ಆರೋಪಿಃ 1) ಶಂಕರ ತಂದೆ ಕೃಷ್ಣ ಭಟ್ಟ,
ವಯಸ್ಸುಃ 48 ವರ್ಷಗಳು,
ಉದ್ಯೋಗಃ ರೈತಾಬಿ ಕೆಲಸ,
ಸಾಕೀನಃ ಹೆಗ್ಗಾರಮಕ್ಕಿ, ಸಾಲಕೋಡ,
ತಾಲೂಕುಃ ಹೊನ್ನಾವರ.

**<u>ಆಪಾದನೆ</u>**

ಪ್ರಶ್ನೆ1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳನ್ನ ಕೇಳಿದಿರಾ? ಅದು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆ2. ನೀವು ಸದ್ರಿ ದೋಷಾರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಸದರಿ ದೋಷಾರೋಪಣೆಗಳನ್ನ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನ ಸಹ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಅವರು ನೀಡಿದ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)

**ಸಹಿ ಇದೆ.**

ದಿನಾಂಕಃ 31-08-2024 **(ಶ್ರೀ ಬಿ.ಸಿ. ಚಂದ್ರಶೇಖರ್)**

ಸ್ಥಳಃ ಹೊನ್ನಾವರ **ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**
**ಫೌಜುದಾರಿ ಪ್ರಕರಣ ಸಂಖ್ಯೆ 35/2018**

ಫಿರ್ಯಾದಿಃ ಸರಕಾರದ ಪರವಾಗಿ
ಪೋಲಿಸ್ ಉಪ-ನಿರೀಕ್ಷಕರು,
ಹೊನ್ನಾವರ ಪೋಲಿಸ್ ಠಾಣೆ, ಹೊನ್ನಾವರ.

**-ವಿರುದ್ಧ-**

ಆರೋಪಿಃ 2) ಶ್ರೀಧರ ತಂದೆ ವಾಸುದೇವ ಹೆಗಡೆ,
ವಯಸ್ಸುಃ 34 ವರ್ಷಗಳು,
ಉದ್ಯೋಗಃ ಶ್ರೀ ಕರಿಕಾನ ಪರಮೇಶ್ವರಿ ವ್ಯವಸಾಯ ಸೇವಾ ಸಹಕಾರಿ ಸಂಘ ನಿಯಮಿತದಲ್ಲಿ ಮಾಜಿ ಗುಮಾಸ್ತ,
ಸಾಕೀನಃ ಹೆಗ್ಗಾರಮಕ್ಕಿ, ಸಾಲಕೋಡ,
ತಾಲೂಕುಃ ಹೊನ್ನಾವರ.

**ಆಪಾದನೆ**

ಪ್ರಶ್ನೆ1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳನ್ನ ಕೇಳಿದಿರಾ? ಅದು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆ2. ನೀವು ಸದ್ರಿ ದೋಷಾರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಸದರಿ ದೋಷಾರೋಪಣೆಗಳನ್ನ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನ ಸಹ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಅವರು ನೀಡಿದ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)

**ಸಹಿ ಇದೆ.**

ದಿನಾಂಕಃ 31-08-2024 **(ಶ್ರೀ ಬಿ.ಸಿ. ಚಂದ್ರಶೇಖರ್)**

ಸ್ಥಳಃ ಹೊನ್ನಾವರ **ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**